ಈಗಾಗಲೇ ನಾವು ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಕ್ರಮ ಕೈಗೊಳ್ಳುತ್ತಿದ್ದೇನೆ. ಈಗ ಅಲ್ಲಿರುವಂತಹ 10 ಹಾಸಿಗೆಗಳ ಜೊತೆಗೆ ಇನ್ನೂ 40 ಹಾಸಿಗೆಗಳನ್ನು ಸೇರಿಸಿ ಒಟ್ಟು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಸರ್ಕಾರ ಆದನ್ನು ಮಾಡುತ್ತಿದೆ. ಆ ಆಸ್ಪತ್ರೆಗೆ ನಾಲ್ಕು ವೈದ್ಯರಿರಬೇಕಾಗಿತ್ತು, ಆದರೆ ಕೇವಲ ಇಬ್ಬರು ಇದ್ದಾರೆ. 40-50 ಜನ ಇದೀಗ ಸ್ನಾತಕೋತ್ತರ ಶಿಕ್ಷಣವನ್ನು ಮುಗಿಸಿ ಹೊರಬರುತ್ತಿದ್ದಾರೆ. ಎಲ್ಲೆಲ್ಲಿ ವೈದ್ಯರ ಅಗತ್ಯ ಇದೆಯೋ ಆ ಕಡೆಗಳಲ್ಲಿ ನಾನು ಅವರನ್ನು ಪೋಸ್ಟ್ ಮಾಡುತ್ತೇನೆ. 5 ಹೆಚ್ಚುವರಿ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವಂತೆ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. 1987 ನೇ ಇಸವಿಯಲ್ಲೇ ಆರೋಗ್ಯ ಘಟಕಗಳನ್ನು ತೆರೆಯತಕ್ಕದ್ದನ್ನೂ ರದ್ದು ಮಾಡಿರುವುದರಿಂದ, ಹೆಚ್ಚುವರಿ ಆರೋಗ್ಯ ಘಟಕ ತೆರೆಯುವ ಪ್ರಶ್ನೆ ಸರ್ಕಾರದ ಮುಂದಿಲ್ಲ ಎಂಬುದನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೇ, ಅಲ್ಲಿ ಏನಾಗಿದೆ ಎಂದರೆ, ಬರೇ ವಿಶ್ವವಿಖ್ಯಾತ ಎಂದು ಅಷ್ಟನ್ನು ಹೇಳಿ, ಅಷ್ಟನ್ನು ನೋಡಿಕೊಂಡು ಬರುವುದೇ ಆಗಿ ಹೋಗಿಬಿಟ್ಟಿದೆ. ಯಾವ ಸೌಲಭ್ಯಗಳೂ ಕೂಡ ಅಂತಹ ಸ್ಥಳಗಳನ್ನೇ ದೊರಕುತ್ತಿಲ್ಲ. ಅದಕ್ಕೆ ಈ ರೀತಿಯಲ್ಲಾದರೂ ತಾವು ವಿಶೇಷವಾಗಿ ಏನಾದರೂ ಮಾಡಿ ಸ್ವಾಮಿ. ಬೇಲೂರು ಎಲ್ಲದರಲ್ಲೂ ವಿಶ್ವವಿಖ್ಯಾತವಾಗಬೇಕು. ಬೇಲೂರು ಬರೀ ಶಿಲಾಬಾಲಿಕೆಯರನ್ನು ನೋಡಿಕೊಂಡು ಬರಲು ವಿಶ್ವವಿಖ್ಯಾತವಾಗಬಾರದು. ಅದನ್ನು ಎಲ್ಲಾ ವಿಷಯಗಳಲ್ಲೂ ವಿಶ್ವವಿಖ್ಯಾತವನ್ನಾಗಿ ಮಾಡಬೇಕು.

ಅಧ್ಯಕ್ಷರು :- ಈಗ ಆದನ್ನು 50 ಮಾಡಿದ್ದಾರೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಆದನ್ನು ನೂರಕ್ಕೆ ಏರಿಸುವ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು :- ಪ್ರಯತ್ನ ಮಾಡಿ, ಆದನ್ನೂ ಮಾಡಿಸೋಣ.

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಈಗ ಬಹುತೇಕ ಈ ಯೋಜನೆಗಳಡಿಯಲ್ಲಿ ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದರಿಂದ ವರ್ಕ್‌ಲೋಡ್ ಕಡಿಮೆ ಆಗಬಹುದು ಎಂಬುದು ನನ್ನ ಭಾವನೆಯಾಗಿದೆ. ಪೇಷೆಂಟ್ಸ್ ಎಲ್ಲಾ ಕಡೆಗೆ ಹೋಗದೇ.... ಹಾಗಾಗಿ ಈಗ ಘಟಕಗಳ ಅಗತ್ಯವಿಲ್ಲ.

ವಿಷಯ :- ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗದ ನಿಯಂತ್ರಣಕ್ಕೆ ಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 263 (1735)

ಶ್ರೀ ಕೆ. ಎಮ್. ಕೃಷ್ಣಮೂರ್ತಿ (ಕಡೂರು) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿ ಮಲೇರಿಯ ಖಾಯಿಲೆ ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಿಯಂತ್ರಣಕ್ಕಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ರೋಗ ಪತ್ತೆ ಮಾಡುವ ಪ್ರಯೋಗ ಶಾಲಾ ಪರೀಕ್ಷಕರ ಖಾಲಿ ಹುದ್ದೆ ಎಷ್ಟು? ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ.

ಆ) ಕಡೂರು ತಾಲ್ಲೂಕಿನಲ್ಲಿ ಮಲೇರಿಯ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಎಲ್ಲಾ ಜ್ವರ ಪೀಡಿತರಿಂದ ರಕ್ತ ಲೇಪನ ಸಂಗ್ರಹಿಸಿ ಮಲೇರಿಯಾ ಪತ್ತೆಯಾದ ಪ್ರಕರಣ ಗಳಿಗೆ ತೀವ್ರ ಚಿಕಿತ್ಸೆ ನೀಡುತ್ತಿದ್ದಾರೆ.

2. ಮಲೇರಿಯ ಹೆಚ್ಚಾಗಿ ಕಂಡು ಬಂದಿರುವ ಪ್ರದೇಶಗಳಲ್ಲಿ ತಾಲ್ಲೂಕಿನಲ್ಲಿ ತುರ್ತು ಚಿಕಿತ್ಸೆಗಾಗಿ ಒಟ್ಟು 124 ಜ್ವರ ಚಿಕಿತ್ಸಾ ಕೇಂದ್ರಗಳು ಮತ್ತು 283 ಔಷಧಿ ವಿತರಣ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

3. ಸಾಕಷ್ಟು ಸಂಖ್ಯೆಯಲ್ಲಿ ಮಲೇರಿಯ ನಿರೋಧಕ ಗುಳಿಗೆಗಳನ್ನು ಸರಬರಾಜು ಮಾಡಲಾಗಿದೆ.

4. ಸೊಳ್ಳೆ ಉತ್ಪತ್ತಿಯನ್ನು ನಿಯಂತ್ರಿಸಲು ಹಲವು ಆಯ್ದ ಪ್ರದೇಶಗಳಲ್ಲಿ ಸೊಳ್ಳೆಮರಿಗಳನ್ನು ತಿನ್ನುವ ಮೀನುಗಳನ್ನು ಬಿಡಲಾಗಿದೆ. ಮೀನುಗಾರಿಕೆ ಇಲಾಖೆಗೆ ಇಂತಹ ಮೀನುಗಳನ್ನು ಅಭಿವೃದ್ಧಿಗೊಳಿಸಲು ಕಡೂರು ತಾಲ್ಲೂಕಿ ನಲ್ಲಿ ಸೂಕ್ತ ತಾಣಗಳನ್ನು ನಿರ್ಮಿಸಲು ಹಣವನ್ನು ಬಿಡುಗಡೆ ಮಾಡಲಾಗಿದೆ.

5. ರೋಗ ವಾಹಕ ಸೊಳ್ಳೆಗಳನ್ನು ನಿಯಂತ್ರಿಸಲು ಪರಿಣಾಮಕಾರಿಯಾಗು ವಂತಹ ವಿಶೇಷವಾದ ನೂತನ ಕೀಟನಾಶಕವಾದ ಸಿಂಥೆಟಿಕ್ ಪೈರಿತ್ರಾಯಿಡ್‌ನ್ನು ಜುಲೈ 96 ರ ಕೊನೆಯ ವಾರದಿಂದ ಸಿಂಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಕಡೂರು ತಾಲ್ಲೂಕಿನಲ್ಲಿ ಒಟ್ಟು 10 ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 5 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದ ಹುದ್ದೆಗಳಿಗೆ ತಾತ್ಕಾಲಿಕ ಬದಲಿ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಏನು ಹೇಳಿದ್ದಾರೆ, ಆರೋಗ್ಯ ಇಲಾಖೆಯಲ್ಲಿ ಅಂತಹ ತ್ವರಿತವಾಗಿ ಕೆಲಸ ನಡೆಯುತ್ತಿಲ್ಲ ಎಂದು ನಾನು ಅಭಿಪ್ರಾಯ ಪಡಬೇಕಾಗುತ್ತದೆ. ಮಲೇರಿಯಾ ದಿನದಿನಕ್ಕೆ ಜಾಸ್ತಿ ಯಾಗುತ್ತಿದೆ. ಮಲೇರಿಯಾ ಹೆಚ್ಚಾಗಿ ಕಂಡು ಬಂದಂತಹ ಪ್ರದೇಶದಲ್ಲಿ ಕೈಗೊಂಡ ಕ್ರಮದ ಬಗ್ಗೆ ತಿಳಿಸಿದ್ದಾರೆ. ರಕ್ತ ಪರೀಕ್ಷೆಯನ್ನು ಕೂಡ ಮಾಡಲಿಕ್ಕೆ ಪ್ರಯೋಗ ಶಾಲೆಯಲ್ಲಿ ತಂತ್ರಜ್ಞರು ಇಲ್ಲ, ವೈದ್ಯರು ಇಲ್ಲ. ಕಳೆದ ವರ್ಷಕ್ಕಿಂತ ಈ ವರ್ಷ ನೋಡಿದರೆ ಮಲೇರಿಯಾ ಜಾಸ್ತಿಯಾಗಿದೆ. ಕಳೆದ ವರ್ಷ ಮೂರನೇ ಸಾರಿ ಮಲೇರಿಯಾ ಆದವರೂ ಕೂಡ ಸಾವನಪ್ಪಿದ್ದಾರೆ ಎಂಬುದನ್ನು ಮಾನ್ಯ ಅಧ್ಯಕ್ಷರ ಮೂಲಕ ಆರೋಗ್ಯ ಸಚಿವರ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ಸರಿಯಾದ ಪರಿಶೀಲನೆಯನ್ನು ಮಾಡಿ ಕ್ರಮವನ್ನು ಕೈಗೊಳ್ಳಬೇಕು ಅಂತ ಹೇಳಿ ಆರೋಗ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ. ಏಕೆಂದರೆ ಮಲೇರಿಯಾ ಹೊಸದುರ್ಗ, ಕಡೂರು ಮತ್ತು ತರೀಕೆರೆ ಭಾಗದಲ್ಲಿ ಬಹಳ ಜಾಸ್ತಿಯಾಗಿದೆ. ಆರೋಗ್ಯ ಇಲಾಖೆಯವರು ಸರಿಯಾದ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ ಅದರ ತೊಂದರೆಯನ್ನು ಜನರು ಅನುಭವಿಸುತ್ತಾರೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಬೇಕು. ಕಳೆದ ಸಾರಿ ಮಾನ್ಯ ಸಚಿವರು ಮಲೇರಿಯಾ ಕೇಂದ್ರವನ್ನು ಅಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಇಲ್ಲಿಯವರೆಗೂ ಅದನ್ನು ಮಾಡಲಿಲ್ಲ.

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಭಾರತ ದೇಶಕ್ಕೆ ಮಲೇರಿಯಾ 1991-92 ನೇ ಇಸವಿಯಲ್ಲಿ ಮಾಪಸ್ ಬಂದು, ಬೃಹತ್ ಪ್ರಮಾಣದಲ್ಲಿ ಹರಡಿದೆ. ಇದು ಬೇರೆ ರಾಜ್ಯಗಳಲ್ಲಿ ಹೆಚ್ಚು ಗಂಭೀರವಾದಂತಹ ಪರಿಸ್ಥಿತಿಯನ್ನುಂಟು ಮಾಡಿ ಸಾವಿರಾರು ಸಾವು ನೋವುಗಳಿಗೆ ಕಾರಣವಾಗಿದೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲೂ ಕೂಡ 4-5 ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಲೇರಿಯಾ ರೋಗ ಇದೆ. ನಾವು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ 9 ಕೋಟಿ ರೂ. ಗಳನ್ನು ಖರ್ಚು ಮಾಡತಕ್ಕಂಥ ಇಲಾಖೆ ಏನು ಇವತ್ತು, ಮಲೇರಿಯಾ ನಿರ್ಮೂಲನ ಕಾರ್ಯಕ್ರಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ ಸುಮಾರು 21 ಕೋಟಿ ರೂ. ಗಳನ್ನು ಗ್ರಾಮೀಣ ಪ್ರದೇಶಕ್ಕೆ ಮತ್ತು ಸುಮಾರು 5 ಕೋಟಿ ರೂ. ಗಳಷ್ಟು ಪಟ್ಟಣ ಪ್ರದೇಶಕ್ಕೆ ಖರ್ಚು ಮಾಡುತ್ತಿದ್ದೇವೆ. ಕಡೂರು ತಾಲ್ಲೂಕಿನಲ್ಲಿ ನಾವು ಈಗಾಗಲೇ ಸುಮಾರು14 ಲಕ್ಷ ಕ್ಲೋರೋಫಿನ್ ಮಾತ್ರೆಗಳನ್ನು ಕೊಟ್ಟಿದ್ದೇವೆ.

10-40 ಎ. ಎಂ.

1.25 ಲಕ್ಷ ಟ್ರಿನೋಪಿನ್ ಮಾತ್ರೆಗಳನ್ನು ಕೊಟ್ಟಿದ್ದೇವೆ ಕಡೂರು ತಾಲ್ಲೂಕಿನಲ್ಲಿ ಸುಮಾರು ಖಾಲಿ ಇದ್ದಂತಹ 10 ಟೆಕ್ನಿಷಿಯನ್ ಹುದ್ದೆಗಳಲ್ಲಿ ಐದು ಟೆಕ್ನಿಷಿಯನ್‌ಗಳನ್ನು ತುಂಬಿ ಉಳಿದ ಐದು ಜನರ ಪ್ಯಾರಾಮೆಡಿಕಲ್ ವರ್ಕರ್ಸ್‌ನ್ನು ಟ್ರೈನ್ಡ್ ಮಾಡಿ ಇಲ್ಲಿ ಕೊಟ್ಟಿದ್ದೇವೆ. ಸುಮಾರು 124 ಜ್ವರ ಚಿಕಿತ್ಸೆ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದೇವೆ. 250 ಕ್ಕೂ ಹೆಚ್ಚು ಮಾಡಿದ್ದೇವೆ. ಇನ್ನೂ 180 ಪರ್ಸೆಂಟ್ ಇದ್ದಂತಹ ಮಲೇರಿಯಾವನ್ನು

ಇವತ್ತು 65 ರಿಂದ 70 ಪರ್ಸೆಂಟ್‌ಗೆ ಇಳಿಸಿದ್ದೇವೆ. ಅದು ಸೊನ್ನೆ ಪರ್ಸೆಂಟ್‌ಗೆ ಬರಬೇಕು. ಖಾಲಿ ಇದ್ದಂತಹ ಟೆಕ್ನಿಷಿಯನ್ಸ್ ಹುದ್ದೆಗಳಲ್ಲಿ ಸುಮಾರು 190 ಕ್ಕಿಂತ ಹೆಚ್ಚು ಟೆಕ್ನಿಷಿಯನ್ಸ್ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಇನ್ನೂ 200 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆದಷ್ಟು ಬೇಗ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಸುಮಾರು 400 ಮೈಕ್ರೋಸ್ಕೋಪ್‌ಗಳನ್ನು ಕೊಟ್ಟಿದ್ದೇವೆ. 25,000 ಪಂಪ್‌ಗಳನ್ನು ಒದಗಿಸಿಕೊಟ್ಟಿದ್ದೇವೆ. ಮತ್ತು ನಾಲ್ಕು ಲಕ್ಷ ರೂಪಾಯಿಗಳನ್ನು ಮೀನುಗಾರಿಕೆಯಲ್ಲಿ ಹಾಕಿ ಕೊಟ್ಟು ಗ್ಯಾಂಬಿಷಿಯ ಫಿಶ್ ಎಂದು ಈ ಸೊಳ್ಳೆಯನ್ನು ತಿನ್ನತಕ್ಕಂತಹ, ಸೊಳ್ಳೆಗಳನ್ನು ನಾಶ ಮಾಡತಕ್ಕಂತಹ ಕೇಂದ್ರಗಳಿಗೆ ಒಳಪಡಿಸಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇಷ್ಟೆಲ್ಲಾ ಮಾಡಿ 180 ಪರ್ಸೆಂಟ್ ಇದ್ದಂತಹ ಮಲೇರಿಯಾ 65 ರಿಂದ 70 ಪರ್ಸೆಂಟ್‌ಗೆ ಇಳಿಸತಕ್ಕಂತಹ ಪ್ರಯತ್ನವನ್ನು ಮಾಡಿದರೂ ಕೂಡ ಸೊನ್ನೆ ಪರ್ಸೆಂಟ್‌ಗೆ ಇಳಿಸತಕ್ಕಂತಹ ಪ್ರಯತ್ನ ನಮ್ಮ ಇಲಾಖೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ :– ಕೆರೆಯಲ್ಲಿ ನೀರೇ ಇಲ್ಲ, ನೀರು ತುಂಬಿದೆ ಎಂದು ಹೇಳಿ ಸಚಿವರು ಉತ್ತರ ಹೇಳುತ್ತಾರೆ, ನಾವು ಏನು ಹೇಳಬೇಕು? ಕೆರೆಯಲ್ಲಿ ನೀರೇ ಇಲ್ಲ.

ಡಾ. ಹೆಚ್. ಸಿ. ಮಹದೇವಪ್ಪ :– ಯಾವ ಯಾವ ಭಾಗದಲ್ಲಿ ಬಾವಿ ಇರುತ್ತದೆ, ಕೆರೆ ಇರುತ್ತದೆ, ಅಲ್ಲಿ ಮೀನುಗಾರಿಕೆ ಇಲಾಖೆಗೆ ಬಿಟ್ಟಿದ್ದೇವೆ.

ಅಧ್ಯಕ್ಷರು :– ನೀರು ಇಲ್ಲದೆ ಇರುವ ಕೆರೆಯಲ್ಲಿ ಮೀನು ಬಿಟ್ಟರು ಎಂದು ಹೇಳಲಿಲ್ಲ. ಅವರು ಹೇಳಿದ್ದುದು ನೀರು ಇದ್ದಲ್ಲಿ ಎಲ್ಲಾ ಆ ಸೊಳ್ಳೆ ಉತ್ಪಾದನೆ ಮಾಡತಕ್ಕಂತಹ ಮೊಟ್ಟೆಗಳನ್ನು ತಿನ್ನುವುದಕ್ಕೆ ಮಾಡಿದ್ದೇವೆಂದು ಹೇಳಿದರು. ಏನೋ ಕೇಳಬೇಕೆಂದು ಕೇಳಿದರೆ ಅಲ್ಲ. ಪ್ರಶ್ನೆಗಳಿಗೆ ನೀವೂ ತಯಾರಾಗಿ ಬರಬೇಕು.

ಶ್ರೀ ಕೆ. ಎಂ. ಕೃಷ್ಣಮೂರ್ತಿ :– 180 ಪರ್ಸೆಂಟ್ ಇದ್ದುದು 30 ಪರ್ಸೆಂಟ್‌ಗೆ ಇಳಿದಿಲ್ಲ. ಇಲಾಖೆ ಅಧಿಕಾರಿಗಳು ಪತ್ರದಲ್ಲಿ ಹೇಳಿದ್ದಾರೆಯೇ ಹೊರತು, ವಾಸ್ತವವಾಗಿ ಮಲೇರಿಯಾ ಜಾಸ್ತಿ ಇದೆ. ಸಿಂಗಟಗೆರೆ, ಯಗಟಿ ಹೋಬಳಿ; ಕಡೂರು ಕಸಬ, ಮತ್ತು ಕಡೂರು ಪ್ರಾಪರ್‌ನಲ್ಲಿ ಜಾಸ್ತಿ ಇದೆ.

ಡಾ. ಹೆಚ್. ಸಿ. ಮಹದೇವಪ್ಪ :– ತಮಗೆ ಮಾಹಿತಿ ಕಳುಹಿಸಿಕೊಡುತ್ತೇನೆ. ವರ್ಲ್ಡ್ ಬ್ಯಾಂಕ್‌ನವರು, ಗವರ್ನ್‌ಮೆಂಟ್ ಆಫ್ ಇಂಡಿಯಾ, ಹಾಸನ ಜಿಲ್ಲೆಯ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಸೆಮಿನಾರ್ಸ್‌ನ್ನು ಕಂಡಕ್ಟ್ ಮಾಡಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಅಧ್ಯಕ್ಷರೇ, ನಾನು ಮಲೆನಾಡಿನಿಂದ ಬಂದಿರತಕ್ಕಂಥವನು, ಮಲೆನಾಡಿನಲ್ಲಿ ವ್ಯಾಪಕವಾಗಿ ಮಲೇರಿಯಾ ಇದೆ. ಎರಾಡಿಕೇಷನ್

ಪ್ರೋಗ್ರಾಂ ಅಲ್ಲಿ ಯಶಸ್ವಿಯಾಗಿಲ್ಲ. ಮೊದಲು ನಮಗೆ ಶಾಲೆಗಳಲ್ಲಿ ಗುಳಿಗಗಳನ್ನು ನುಂಗಿಸುತ್ತಿದ್ದರು, ಬ್ಲಡ್ ಸ್ಯಾಂಪ್ಲ್ಡ್ ಎಲ್ಲಾ ಶಾಲೆಗಳಿಂದ ರಕ್ತ ತೆಗೆದುಕೊಂಡು ಹೋಗುತ್ತಿದ್ದರು. ಅಂತಹ ಕಾರ್ಯಕರ್ತರ ಕೊರತೆ ಇವತ್ತು ಇದೆ. ನೀವು ವ್ಯಾಪಕವಾಗಿ ಆ ಕಾರ್ಯಕರ್ತರನ್ನು ನೇಮಕ ಮಾಡಿ ಇದನ್ನು ತೆಗೆಯಲಿಕ್ಕೆ ಹೋದರೆ ಬಹಳ ದೊಡ್ಡ ಸಾವು ನೋವು ಅನುಭವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನನ್ನ ತಾಲ್ಲೂಕಿನ ಬಗ್ಗೆ ಕಳೆದ ಸಾರಿ ನಾನು ಇಲ್ಲಿ ಪ್ರಶ್ನೆ ಹಾಕಿದ್ದೇ ಬೇಸಿಕ್ ಹೆಲ್ತ್ ವರ್ಕರ್ಸ್ ಅಭಾವ ತುಂಬ ಇದೆ. ಅವರನ್ನು ಜಾಸ್ತಿ ಮಾಡುವ ಪ್ರಯತ್ನ ನಿಮ್ಮ ಕಡೆಯಿಂದ ಆಗುತ್ತದೆಯೇ?

ಡಾ. ಹೆಚ್. ಸಿ. ಮಹದೇವಪ್ಪ :- ತಮಗೆ ಗೊತ್ತಿರುವ ಹಾಗೆ ಈಗ 8-10 ವರ್ಷಗಳಾದ ಈ ರೆಕ್ಯುಟ್‌ಮೆಂಟ್ ಆಗಿಲ್ಲ ಈಗ ಪ್ರಕಿಯೇ ಪ್ರಾರಂಭವಾಗಿದೆ. ಸುಮಾರು ಜನರನ್ನು ರೆಕ್ಯುಟ್‌ಮೆಂಟ್ ಮಾಡಿದ್ದೇವೆ. ಇನ್ನು ಮೂರು ತಿಂಗಳೊಳಗೆ ಉಳಿದವರನ್ನು ರಿಕ್ರೂಟ್ ಮಾಡಿ ಮತ್ತೆ ಖಾಲಿ ಹುದ್ದೆಗಳನ್ನು ತುಂಬುವ ಕೆಲಸ ಮಾಡುವುದರ ಜೊತೆಗೆ ಸರ್ಕಾರ ಇದನ್ನು ತೀವ್ರವಾಗಿ ಪರಿಶೀಲನೆ ಮಾಡಿ ಆದಷ್ಟು ಕಡಿಮೆ ಮಾಡಿದೆ.ಪ್ರಮಾಣಿಕವಾದ ಪ್ರಯತ್ನ ನಮ್ಮ ಇಲಾಖೆ ಮಾಡಿದೆ. ಇದನ್ನು ಸೊನ್ನೆ ಪರ್ಸೆಂಟ್‌ಗೆ ಇಳಿಸತಕ್ಕಂಥದ್ದು ಆಗತ್ಯ ಇದೆ. ಅದನ್ನು ತೀವ್ರವಾಗಿ ಗಮನಹರಿಸುತ್ತೇನೆ.

ಶ್ರೀ ಎಸ್. ಯೋಗೀಶ್ ಭಟ್ :- ದಕ್ಷಿಣ ಕನ್ನಡ ಜಿಲ್ಲೆ ಮಲೇರಿಯಾದಿಂದ ತೀವ್ರ ಪೀಡಿತವಾಗಿದೆ? ಸಾವುನೋವುಗಳ ಸಂಖ್ಯೆ ಕೂಡ ವಿಪರೀತವಾಗಿದೆ. ಅನೇಕ ಕಡೆಗಳಲ್ಲಿ ಇವತ್ತು ಮಲೇರಿಯಾ ಒಂದು ಹಂತ ದಾಟಿ ಹಾಲ್ಸಿಫೆರಂ ಎಂದು ಮೆದುಳಿಗೆ ತಗುಲುವಂತಹ ರೋಗ ಜ್ವರ ಬಂದು ತುಂಬ ಕಾಯಿಲೆ ಉಲ್ಬಣಗೊಂಡು ಅನೇಕ ಸಾವು ನೋವುಗಳು ಆಗುತ್ತಿವೆ. ಈ ಹಿನ್ನೆಲೆಯಲ್ಲಿ ನಾನು ನಿಮ್ಮ ಹತ್ತಿರ ವಿಶೇಷವಾಗಿ ಕೇಳತಕ್ಕಂಥದ್ದು ಕೊರತೆ ಇರುವಂತಹ ತಂತ್ರಜ್ಞರ ಬೇಡಿಕೆ ಯಾವುದು ಇದೆ ಅದರ ಪೂರೈಕೆ ಕಳೆದ ಒಂದು ವರ್ಷದಿಂದ ಸರಿಯಾಗಿ ಮಾಡಿಲ್ಲ. ಡಿ.ಹೆಚ್.ಒ. ಕಛೇರಿಗಳಲ್ಲಿ ತಾವು ಕೇಳಬಹುದು. ಅಥವಾ ಅನೇಕ ಆಸ್ಪತ್ರೆಗಳಲ್ಲಿ ಕೂಡ ಇಷ್ಟೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಕೂಡ ತಂತ್ರಜ್ಞರ ಕೊರತೆ ಇರುವುದರಿಂದ ಇದನ್ನು ಸೂಕ್ತವಾಗಿ ಸೂಕ್ತ ಸಮಯದಲ್ಲಿ ಸ್ಲೈಡ್ಸ್ ಇದೆ ಅದನ್ನು ಸರಿಯಾಗಿ ಪತ್ತೆ ಹಚ್ಚುವಂತಹ ವಿಧಾನ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ತಾವು ಕಾಳಜಿ ವಹಿಸಬೇಕು. ಎರಡನೆಯದು ಅನೇಕ ಸ್ವಯಂ ಸೇವಾ ಸಂಸ್ಥೆಗಳು ಇವತ್ತು ಸಾಕಷ್ಟು ಮನೆ ಮನೆಗೆ ಹೋಗಿ ಕೆಲಸ ಮಾಡುತ್ತಿದ್ದರೂ ಕೂಡ ನಗರದಲ್ಲಿ ಸ್ವಚ್ಛತಾ ಕೊರತೆ ಸಮಸ್ಯೆಯಿಂದಾಗಿ ಈ ರೋಗ ಉಲ್ಬಣವಾಗುತ್ತಿದೆ. ವಿಶೇಷವಾಗಿ ಬಹಳ ಮಹಡಿ ಕಟ್ಟಡಗಳಲ್ಲಿ ಮಳೆ ನೀರು ನಿಂತು ಸ್ಟೋರೇಜ್ ಆಗಿ ಎಲ್ಲೆಲ್ಲಿ ನೀರು ಸ್ಟೋರೇಜ್ ಆಗುತ್ತದೆಯೋ ಅಥವಾ ಮಳೆ ನೀರು ಸ್ಟೋರೇಜ್ ಆಗುತ್ತದೆಯೋ ಅಲ್ಲಲ್ಲಿ ಉಲ್ಬಣವಾಗುತ್ತಿದೆ. ಅದನ್ನು ಪ್ರಿವೆಂಟ್ ಮಾಡುವುದಕ್ಕೆ ಯಾವ ರೀತಿ ಚಿಮಣಿ ಎಣ್ಣೆ ಹಾಕುವುದರ ಮೂಲಕ ಅಥವಾ ಔಷಧಿಯನ್ನು ಸಿಂಪಡಿಸುವ ಮೂಲಕ ಅಂತಹ ಕಡೆಗಳಲ್ಲಿ ಹೆಚ್ಚಿನ ಸೊಳ್ಳೆಗಳು ಉತ್ಪನ್ನ ಆಗದೆ ಇರುವ ರೀತಿಯಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದೇ?

ಅಧ್ಯಕ್ಷರು :- ಉಪ ಪ್ರಶ್ನೆ ಅಂದರೆ ಅಷ್ಟೊಂದು ಸಮಯ ತೆಗೆದುಕೊಂಡರೆ ನಾನು ಹೇಗೆ ಮಾಡುವುದು? ನೀವು ಉದ್ದವಾಗಿ ಪ್ರಶ್ನೆಯನ್ನು ಕೇಳಿದರೆ ಅವರಿಗೆ ಏನು ಅರ್ಥವಾಗುತ್ತದೆ? ಏನೋ ಕಾಟಾಚಾರಕ್ಕೆ ಹೇಳಿದಂತಾಗುತ್ತದೆ. It should be a challenge to the intelligence of the Minister. It should be brief....

ಶ್ರೀ ಎನ್. ಯೋಗೀಶ್ ಭಟ್ :- ಅಧ್ಯಕ್ಷರೇ, ಎರಡು ವಿಷಯ ಕೇಳುತ್ತೇನೆ, ತಂತ್ರಜ್ಞರ ಕೊರತೆ ಇರುವಂಥದ್ದು ತಕ್ಷಣ ಭರ್ತಿ ಮಾಡಿ ಮತ್ತು ಪೌರ ಕಾರ್ಮಿಕರ ಕೊರತೆ ಎಲ್ಲಿ ಇದೆ, ಮಹಾ ನಗರ ಪಾಲಿಕೆಯಲ್ಲಿ ಸ್ವಚ್ಛತಾ ವಿಭಾಗಕ್ಕೆ ಹೆಚ್ಚಿನ ಶಕ್ತಿ ಕೊಡುವುದು,ಮತ್ತು ಮೂರನೆಯದು ಎಂದರೆ ಫಾಗಿಂಗ್ ಮೆಷಿನ್ ಮೂಲಕ ಹೆಚ್ಚಿನ ಸೊಳ್ಳೆಗಳ ವಂಶವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯ ಇದೆ ಅಂತಹ ಕಡೆಗಳಲ್ಲಿ ಈ ಫಾಗಿಂಗ್ ಮೆಷಿನ್ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆಯೇ?

ಡಾ: ಹೆಚ್. ಸಿ. ಮಹದೇವಪ್ಪ :- ಸನ್ಮಾನ್ಯ ಸಭಾಧ್ಯಕ್ಷರೇ, ಮಂಗಳೂರು ನಗರಪಾಲಿಕೆ ಒಂದು ಸ್ಥಳೀಯ ಸಂಸ್ಥೆ, ನೇರವಾಗಿ ಅಲ್ಲಿ ಅವರು ಬೈಲಾವನ್ನು ಅಡಾಪ್ಟ್ ಮಾಡಿಕೊಳ್ಳಬೇಕಾಗುತ್ತದೆ. ಹಾಗೆಯೇ ನಾನು ನಮ್ಮ ನಿರ್ದೇಶಕರನ್ನು ಅಲ್ಲಿಗೆ ಕಳುಹಿಸಿ ನಮ್ಮ ಇತರ ಅಧಿಕಾರಿಗಳನ್ನು ಕಳುಹಿಸಿ ಸ್ವಂಘ ಸಂಸ್ಥೆಗಳು ಸೇರಿ ಒಂದು ಸಮಿತಿಯನ್ನು ಮಾಡಿಕೊಂಡು ಮಲೇರಿಯಾ ನಿಯಂತ್ರಣ ಕಾರ್ಯಕ್ರಮದಲ್ಲಿ ಎಲ್ಲರೂ ಸಹಕಾರ ಕೊಟ್ಟದ್ದರಿಂದ ಸ್ವಲ್ಪ ಮಟ್ಟಿಗೆ ಅಲ್ಲಿ ಕಡಿಮೆಯಾಗಿದೆ. ನಾನು ಈಗಾಗಲೇ ಹೇಳಿದ್ದೇನೆ, ಟೆಕ್ನಿಷಿಯನ್ ಕೊರತೆ ಇತ್ತು, ಕ್ಯಾಬಿನೆಟ್ ಕೂಡ ರಿಟೈರ್ಡ್ ಆಗಿರತಕ್ಕಂತಹ ಟೆಕ್ನಿಷಿಯನ್ಸ್ ಹುದ್ದೆಗಳನ್ನು ತುಂಬಲಿಕ್ಕೆ ನಮಗೆ ಅನುಮತಿ ಕೊಟ್ಟಿತ್ತು. ಆ ಕೆಲಸ ಮಾಡಿದ್ದೇವೆ. 190ಕ್ಕೂ ಹೆಚ್ಚು ಟೆಕ್ನಿಷಿಯನ್ ತುಂಬಿ ಇನ್ನು 200 ಟೆಕ್ನಿಷಿಯನ್‌ಗಳನ್ನು ತುಂಬುವುದಕ್ಕೆ ಪ್ರಕ್ರಿಯೆ ಪ್ರಾರಂಭವಾಗಿದೆ ತಕ್ಷಣ ಆ ಕೆಲಸವನ್ನು ಮಾಡುತ್ತೇವೆ. ಕಾರ್ಪೋರೇಷನ್ ಬೈಲಾ ಅಡಾಪ್ಟ್ ಮಾಡಿಕೊಂಡು ಕಾರ್ಯಕರ್ತರು ಕಡಿಮೆ ಇದ್ದಾರೋ, ಬೇರೆ ಬೇರೆ ಸ್ವಚ್ಛತಾ ಕಾರ್ಯಕ್ರಮದಲ್ಲಿ ಹೆಲ್ತ್ ಏನಿದೆ ಅವೆಲ್ಲವನ್ನು ಇಂಪ್ಲಿಮೆಂಟ್ ಮಾಡುವುದು, ಕಾರ್ಪೋರೇಷನ್‌ನಿನ ಆದ್ಯ ಕರ್ತವ್ಯವಾಗಿರುವುದರಿಂದ ಅವರೂ ಕೂಡ ಕ್ರಮ ಕೈಗೊಳ್ಳಬೇಕೆಂದು, ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳ ಹತ್ತಿರ ನಾನು ಕೂಡ ಮಾತನಾಡಿದ್ದೇನೆ. ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೆ, ನನ್ನದು ಕೂಡ ಕಡೂರು ಬಾರ್ಡರ್‌ಗೆ ಬರತಕ್ಕಂತಹ ಕ್ಷೇತ್ರವಾಗಿರುವುದರಿಂದ ನಮ್ಮಲ್ಲೂ ಕೂಡ ಸೊಳ್ಳೆ ಕಾಟ ಜಾಸ್ತಿಯಾಗಿ ಮಲೇರಿಯಾ ಜಾಸ್ತಿ ಇದೆ. ಆದರೆ ನೀವು ನಿಯಂತ್ರಣಕ್ಕೋಸ್ಕರ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಆದರಿಂದ ಯಾವುದರಿಂದಲೂ ಕೂಡ ಪ್ರಯೋಜನವಾಗುವುದಿಲ್ಲ. ದಯಮಾಡಿ ನನ್ನ ಕ್ಷೇತ್ರದಲ್ಲಿ ಕೂಡ ಇಂತಹ ಪ್ರಶ್ನೆ ಸುಮಾರು ಏಳು ವರ್ಷಗಳ ಹಿಂದೆ ಪ್ರಾರಂಭವಾದ ಸಂದರ್ಭದಲ್ಲಿ ಬರೀ ಡಿ.ಡಿ.ಟಿ. ಹೊಡೆಯುವುದರಿಂದ ಪ್ರಯೋಜನವಾಗುವುದಿಲ್ಲ. ಆದಕ್ಕೆ ಒಂದೇ ಸಾಧನ ಅಂದರೆ ಇಂಗ್ಲೆಂಡ್‌ನಿಂದ ತರಿಸತಕ್ಕಂತಹ ಐಕಾನ್ ಎಂಬ ಒಂದು ಪೌಡರ್ ಹೊಡೆಯುವುದರಿಂದ

ಇದು ಕಡಿಮೆಯಾಗುತ್ತದೆ. ಏಳು ವರ್ಷಗಳ ಹಿಂದೆ ಹೊಡೆದದ್ದರಿಂದ ಇವತ್ತಿನವರೆಗೂ ನಮ್ಮಲ್ಲಿ ಸೊನ್ನೆ ಪರ್ಸೆಂಟ್‌ಗೆ ಬಂದಿದೆ. ಇವತ್ತು ನಮ್ಮ ಹುಳಿಯಾರು ಹಾಗಲವಾಡಿ ಭಾಗದಲ್ಲಿ ಸೊನ್ನೆ ಪರ್ಸೆಂಟ್‌ಗೆ ಬಂದಿರುವುದರಿಂದ ದಯಮಾಡಿ ಇದು ಒಂದು ಬಿಟ್ಟರೆ ಬೇರೆ ಯಾವುದೇ ಕ್ರಮವನ್ನು ಅನುಸರಿಸುವುದರಿಂದಲೂ ಕೂಡ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಇಡೀ ರಾಜ್ಯಾದ್ಯಂತ ಇದನ್ನು ಆಳವಡಿಸತಕ್ಕಂತಹ ಪ್ರಯತ್ನ ಮಾಡಿದರೆ ಬಹುಶಃ 100ಕ್ಕೆ ನೂರರಷ್ಟು ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ. ಆ ಕಾರ್ಯಕ್ರಮ ಏನಾದರೂ ಹಾಕಿಕೊಳ್ಳವುದಕ್ಕೆ ಸಾಧ್ಯವೇ?

ಡಾ: ಹೆಚ್. ಸಿ. ಮಹದೇವಪ್ಪ :- ಸನ್ಮಾನ್ಯ ಸಭಾಧ್ಯಕ್ಷರ, ಡಿ.ಡಿ.ಟಿ.ಗೆ ಕ್ರಮೇಣವಾಗಿ ಅನಾಫಲಿ ಸೊಳ್ಳೆಗಳು ರೆಸಿಸ್ಟೆನ್ಸ್‌ನ್ನು ಬೆಳೆಸಿಕೊಳ್ಳುತ್ತವೆ. ಅದಕ್ಕೆ ಪರ್ಯಾಯವಾಗಿ ಕೇಂದ್ರ ಸರ್ಕಾರ ನಮ್ಮ ರಾಷ್ಟ್ರದ ಮೂರು ಜನ ಅಧಿಕಾರಿಗಳಲ್ಲಿ ನಮ್ಮ ರಾಜ್ಯದ ಅಧಿಕಾರಿ ಒಬ್ಬರಿಗೆ ಕೂಡ ಕರೆಯಿಸಿ ಚರ್ಚೆ ಮಾಡಿ ಸಿಂಥೆಟಿಕ್ ಪ್ಯಾರಾಥೈರಾಡ್ ಅನ್ನುವ ಹೊಸ ಔಷಧಿ ಸಿಪಂಡಿಕೆಯನ್ನು ಅವರು ಆಳವಡಿಸಿದ್ದಾರೆ. ಇದು ಏನಾದರೂ ರೆಸಿಸ್ಟೆನ್ಸ್ ಡೆವಲಪ್ ಆದರೆ ಕಷ್ಟ, ಮತ್ತೆ ಮಲೇರಿಯಾ ನಿವಾರಣೆಗಾಗಿ ಈಗಾಗಲೇ 18 ಟನ್ ಔಷಧಿಯನ್ನು ತರಿಸಿ ಇಟ್ಟುಕೊಂಡಿದ್ದೇವೆ. ಎಲ್ಲೆಲ್ಲಿ ತೀವ್ರ ಪ್ರಮಾಣದಲ್ಲಿ ಇದೆ ಅಲ್ಲಿ ಹೊಡೆಯಲಿಕ್ಕೆ ತಂದಿಟ್ಟಿದ್ದೇವೆ. ಒಮ್ಮೆ ರೆಸಿಸ್ಟೆನ್ಸ್ ಆಗಿ ಬೆಳವಣಿಗೆಯಾದರೆ ಮಲೇರಿಯಾಕ್ಕೆ ಔಷಧಿ ಕೂಡ ಹೊಡೆಯುವುದು ಕಷ್ಟವಾಗುತ್ತದೆ. ಮಲೇರಿಯಾದಿಂದ ದೊಡ್ಡ ಪ್ರಮಾಣದಲ್ಲಿ ಸಾವು ನೋವುಗಳು ಆಗುತ್ತದೆ. ಎಲ್ಲೆಲ್ಲಿ ಅಗತ್ಯ ಇದೆ ಎಂಬುದನ್ನು ನೋಡಿಕೊಂಡು ಸಿಂಪಡಿಸುವ ಕೆಲಸ ನಾವು ಮಾಡುತ್ತಿದ್ದೇವೆ. ಈಗಾಗಲೇ ಅದನ್ನು ಬಳಕೆ ಮಾಡಿದ್ದೇವೆ. ಸಿಂಥೆಟಿಕ್ ಪ್ಯಾರಾಥೈರಾಡ್‌ಗೆ ನಾವು ರೆಸಿಸ್ಟೆನ್ಸ್ ಡೆವಲಪ್ ಮಾಡಿದರೆ ಮತ್ತೆ ಮಲೇರಿಯಾ ನಿರ್ಮೂಲನ ಮಾಡುವುದಕ್ಕೆ ಔಷಧಿಯನ್ನು ಕಂಡುಹಿಡಿಯುವುದಕ್ಕೆ ಕಷ್ಟವಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಸಾವು ನೋವುಗಳಾಗುತ್ತವೆ. ಆದ್ದರಿಂದ ನೋಡಿ ಇದನ್ನು ಸಿಂಪಡಿಸುವ ಕೆಲಸವನ್ನು ನಾವು ಮಾಡುತ್ತೇವೆ. ರಾಜ್ಯದಲ್ಲಿ ಮಲೇರಿಯಾ ಶೇಕಡವಾರಿನಲ್ಲಿ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆ ಸುಮಾರು . 40 ಕ್ಕೂ ಹೆಚ್ಚು ಪರ್ಸೆಂಟ್ ಕಾಂಟ್ರಿಬ್ಯೂಷನ್ ಇದೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಆ ಎರಡು ಜಿಲ್ಲೆಗಳಿಗಾಗಿ ವಿಶೇಷವಾಗಿ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ :- ದಯಮಾಡಿ ಐಕಾನ್ ಪೌಡರ್ ಉಪಯೋಗಿಸುತ್ತಿರೋ?

ಡಾ: ಹೆಚ್. ಸಿ. ಮಹದೇವಪ್ಪ :- ನೀವು ಆ ತರಹ ಹೇಳಿ, ಯಾರಾದರೂ ಸಲಹೆ ಮಾಡಿದರೆ ಹಾಗೆ ಕೊಡುವುದಕ್ಕೆ ಬರುವುದಿಲ್ಲ. ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಹಾಗೆ ನಮಗೆ ನಿರ್ದೇಶನ ನೀಡಬೇಕಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ :- ಗವರ್ನಮೆಂಟ್ ಆಫ್ ಇಂಡಿಯಾದವರ ಸಲಹೆ ಮೇಲೆ ನನ್ನ ಕ್ಷೇತ್ರದಲ್ಲಿ ಪ್ರಯೋಗ ಆಗಿರತಕ್ಕಂಥದ್ದು. 100 ಪರ್ಸೆಂಟ್ ಕಂಟ್ರೋಲ್ ಆಗಿದೆ. It is a recommended medicine.

ಅಧ್ಯಕ್ಷರು :- ಒಂದೊಂದು ಪ್ರಶ್ನೆ ಮೇಲೆ 10-10 ಜನ ಕೇಳಿದರೆ ಹೇಗೆ? ಕ್ವಶ್ಚನ್ ಹವರ್ ಹೇಗೆ ನಡೆಸಬೇಕು ಹೇಳಿ? ಅವರು ಡಾಕ್ಟರ್ ಇದ್ದಾರೆ ಒಂದು ಅವಕಾಶ ಕೊಟ್ಟರೆ ನಾನು ಕೇಳುತ್ತೇನೆಂದು ಹೇಳಿದ್ದಾರೆ. ಸದನಕ್ಕೆ ಪ್ರಯೋಜನವಾಗುತ್ತದೆ. ನಿಮ್ಮ ಪಾರ್ಟಿಯವರೇ ನಾಲ್ಕು ಜನರಿಗೆ ಕೊಟ್ಟಿದ್ದೇನೆ. ನೀವು ಸಹಕರಿಸದೆ ಹೋದರೆ ಹೇಗೆ?

ಡಾ : ಎಂ. ಪಿ. ಕರ್ಕಿ :- ಅಧ್ಯಕ್ಷರೆ, ಮೊಟ್ಟೆಗಳನ್ನು ತಿನ್ನತಕ್ಕಂತಹ ಮೀನಿನ ಸಂಗಡ ಸೊಳ್ಳೆಗಳ ಉತ್ಪನ್ನ ಆಗದೆ ಹೋದ ಹಾಗೆ ನಿಂತ ನೀರಿನಲ್ಲಿ ಕ್ರೂಥಾಲ್ ಇದನ್ನು ಸಿಂಪಡಿಸಿದರೆ ವಾರಕ್ಕೆ ಒಂದು ಸಾರಿ ಅಥವಾ ಒಂದು ತಿಂಗಳಲ್ಲಿ ಎರಡು ಸಾರಿ ಸಿಂಪಡಿಸಿದರೆ ಸಾಕಾಗುತ್ತದೆ. ಸೊಳ್ಳೆಗಳ ಉತ್ಪನ್ನವಾಗುವುದು ಕಡಿಮೆಯಾಗುತ್ತದೆ. ಆ ರೀತಿ ಹೊನ್ನಾವರದಲ್ಲಿ ಪ್ರಯೋಗ ಮಾಡಿ ನೋಡಿದ್ದೇವೆ. ಯಶಸ್ವಿಯಾಗಿ ಆಗಿದೆ. ಅದನ್ನು ಮಾಡುವುದಕ್ಕೆ ಇಚ್ಛೆ ಪಡುತ್ತೀರೋ?

ಡಾ : ಹೆಚ್. ಸಿ. ಮಹದೇವಪ್ಪ :- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವ ಕಾರ್ಯಕ್ರಮವನ್ನು ಈಗಾಗಲೇ ನಾವು ಹಾಸನ ಜಿಲ್ಲೆಯಲ್ಲಿ ಪ್ರಾರಂಭಮಾಡಿದ್ದೇವೆ.

ಅಧ್ಯಕ್ಷರು :- ಗ್ರಾಮೀಣಾಭಿವೃದ್ಧಿ ಸಚಿವರ ತಾಯಿಯವರು ತೀರಿಕೊಂಡಿದ್ದಾರೆ ಆದಕಾರಣ ಅವರು ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ. ಆದ ಕಾರಣ ಅವರು ಹೆಸರಿನಲ್ಲಿರತಕ್ಕಂಥ ಎಲ್ಲಾ ಪ್ರಶ್ನೆಗಳನ್ನು ಅವರು ಬಂದಾಗ ಯಾವ ದಿವಸ ಹಾಜರಿರುತ್ತಾರೋ ಆ ದಿವಸ ತೆಗೆದುಕೊಳ್ಳೋಣ ದಯಮಾಡಿ ತಾವು ಸಹಕರಿಸಿ.

ವಿಷಯ :- ಬೀಳಗಿ ತಾಲ್ಲೂಕಿನಲ್ಲಿ ಉರ್ದು ಮಾಧ್ಯಮಿಕ ಶಾಲೆ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 266 (1849)

ಶ್ರೀ ಜೆ. ಟಿ. ಪಾಟೀಲ್ (ಬೀಳಗಿ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀಳಗಿ ತಾಲ್ಲೂಕಿನಲ್ಲಿ ಸಾಕಷ್ಟು ಉರ್ದು ಪ್ರಾಥಮಿಕ ಶಾಲೆಗಳಿದ್ದು ಇದೇ ತಾಲ್ಲೂಕಿನಲ್ಲಿ ಯಾವುದೇ ಉರ್ದು ಮಾಧ್ಯಮಿಕ ಶಾಲೆಗಳು ಇರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಉರ್ದು ಶಾಲೆ ಆರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-